ಅ) ರಾಯಚೂರು ಲೋಕೋಪಯೋಗಿ ಇಲಾಖೆಯ ವಿಭಾಗದಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳಲ್ಲಿ ಇಲ್ಲಿಯವರೆಗೆ ಬಾಕಿ ಇರುವ ಬಿಲ್‌ಗಳ ಸಂಖ್ಯೆ ಎಷ್ಟು;

ಆ) ಬಾಕಿ ಇರುವ ಬಿಲ್‌ಗಳ ಒಟ್ಟು ಅಂದಾಜು ಮೊತ್ತವೆಷ್ಟು;

ಇ) ಬಾಕಿ ಇರುವ ಬಿಲ್‌ಗಳಿಗೆ ಯಾವಾಗ ಹಣ ಭರವಸೆ ಪತ್ರವನ್ನು ನೀಡಲಾಗುವುದು?

ಮಾನ್ಯ ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ರಾಯಚೂರು ಲೋಕೋಪಯೋಗಿ ಇಲಾಖೆ ವಿಭಾಗದಲ್ಲಿ ದಿನಾಂಕ 31-1-2003ರ ಅಂತ್ಯದವರೆಗೆ ವಿವಿಧ ಲೆಕ್ಕ ಶೀರ್ಷಿಕೆಗಳಲ್ಲಿ ಒಟ್ಟು 1360 ಸಂಖ್ಯೆ ಬಿಲ್ಲುಗಳು ಪಾವತಿಯಾಗದೇ ಇವೆ.

ಆ) ಬಾಕಿ ಇರುವ ಬಿಲ್‌ಗಳ ಒಟ್ಟು ಮೊತ್ತ ರೂ. 555.29 ಲಕ್ಷಗಳು.

ಇ) ಹಣ ಭರವಸೆ ಪತ್ರಕ್ಕನುಸಾರವಾಗಿ ಪಾವತಿಸಲಾಗುವುದು.

75 ಕೋಟಿ ಯೋಜನೆಯ ಕಾಮಗಾರಿ

25 (219) ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸಗೂರು) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 75 ಕೋಟಿ ಯೋಜನೆಯ ಅನುದಾನದಲ್ಲಿ ರಾಯಚೂರು ಜಿಲ್ಲೆಯ ಲೋಕೋಪಯೋಗಿ ವಿಭಾಗಕ್ಕೆ ಮಂಜೂರು ಮಾಡಿ ಟೆಂಡರ್ ಮೂಲಕ ಗುತ್ತಿಗೆ ನೀಡಿದ ಕಾಮಗಾರಿಗಳ ಸಂಖ್ಯೆ ಎಷ್ಟು;

ಆ) ರಾಯಚೂರು ಜಿಲ್ಲೆಯ ಉಪ ವಿಭಾಗದ ವ್ಯಾಪ್ತಿಗೆ ಬರುವ ಉಪ ವಿಭಾಗವಾರು ಕಾಮಗಾರಿಗಳ ಮಾಹಿತಿಯನ್ನು ನೀಡುವುದು;

ಇ) ರಾಯಚೂರು ವಿಭಾಗಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಎಷ್ಟು ಕಾಮಗಾರಿಗಳು ಮುಕ್ತಾಯಗೊಂಡಿವೆ; ಮುಕ್ತಾಯಗೊಂಡ ಕಾಮಗಾರಿಗಳಿಗೆ ಹಣವನ್ನು ಪಾವತಿ ಮಾಡಲಾಗಿದೆಯೇ; ಪಾವತಿ ಮಾಡುವಲ್ಲಿ ವಿಳಂಬವಾಗಲು ಕಾರಣಗಳೇನು; ಯಾವಾಗ ಹಣ ಪಾವತಿ ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಹದಿನೈದು.

ಆ) ರಾಯಚೂರು ಜಿಲ್ಲೆಯ ಉಪವಿಭಾಗದ ವ್ಯಾಪ್ತಿಗೆ ಬರುವ ಉಪವಿಭಾಗವಾರು ಮಾಹಿತಿ ಈ ಕೆಳಗಿನಂತಿದೆ.

ಕ್ರ. ಸಂ.	ಉಪ ವಿಭಾಗ	ಕಾಮಗಾರಿ ಸಂಖ್ಯೆ
1.	ರಾಯಚೂರು	3
2.	ಮಾನ್ವಿ	5
3.	ದೇವದುರ್ಗ	2
4.	ಲಿಂಗಸಗೂರು	3
5.	ಸಿಂಧನೂರು	2
	ಒಟ್ಟು	**15**

ಇ) ಲೋಕೋಪಯೋಗಿ ಇಲಾಖೆ ರಾಯಚೂರು ವಿಭಾಗ ಸಂಬಂಧಿಸಿದಂತೆ ಎಲ್ಲಾ 15 ಕಾಮಗಾರಿಗಳು ಮುಕ್ತಾಯಗೊಂಡಿದ್ದು ಅವುಗಳಿಗೆ ಒಟ್ಟು 272.00 ಲಕ್ಷ ರೂ.ಗಳು ಪಾವತಿ ಮಾಡಲಾಗಿದೆ. ಈ 15 ಕಾಮಗಾರಿಗಳಿಗೆ ಒಟ್ಟು ರೂ. 33.08 ಲಕ್ಷ ಬಾಕಿ ಬಿಲ್ಲು ಮಾತ್ರ ಇರುತ್ತದೆ. ಬಾಕಿ ಬಿಲ್ಲುಗಳಿಗೆ ಹಣವನ್ನು ಬಿಡುಗಡೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಗ್ರಾಮ ಸಹಾಯಕರನ್ನು ಖಾಯಂಗೊಳಿಸುವಿಕೆ

27 (206) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗ್ರಾಮ ಸಹಾಯಕರನ್ನು ಖಾಯಂಗೊಳಿಸಲು ಸರ್ವೋಚ್ಚ ನ್ಯಾಯಾಲಯ ಆದೇಶ ನೀಡಿದೆಯೇ?

ಆ) ಹಾಗಿದ್ದಲ್ಲಿ ಖಾಯಂಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಇ) ಖಾಯಂ ಮಾಡಲು ವಿಳಂಬವಾಗಲು ಕಾರಣಗಳೇನು?

ಮಾನ್ಯ ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಹೌದು.

ಆ) ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧ ಸರ್ಕಾರವು ಪುನರ್ ಪರಿಶೀಲನಾ ಅರ್ಜಿಯನ್ನು ಸಂಖ್ಯೆ 284-287:2002 ದಾಖಲಿಸಿದ್ದು, ಈ ಅರ್ಜಿ ಇನ್ನೂ ಇತ್ಯರ್ಥವಾಗಿರುವುದಿಲ್ಲ.

ಇ) - ಮೇಲಿನಂತೆ -

ಅರಣ್ಯ ಇಲಾಖೆಯಿಂದ ಹರಾಜಿನ ಮೂಲಕ ಬೊಕ್ಕಸಕ್ಕೆ ಬಂದಿರುವ ಹಣ

28 (207) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 3 ವರ್ಷಗಳಿಂದ ಕೊಡಗು ಜಿಲ್ಲೆ ಅರಣ್ಯ ಇಲಾಖೆಯಿಂದ ಹರಾಜು ಮೂಲಕ ಸರ್ಕಾರದ ಬೊಕ್ಕಸಕ್ಕೆ ಬಂದಿರುವ ಒಟ್ಟು ಆದಾಯ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು);

ಆ) ಹುಣಸೂರು ಮತ್ತು ಕುಶಾಲನಗರ ಅರಣ್ಯ ಡಿಪೋದಿಂದ ಕಳೆದ 3 ವರ್ಷದಿಂದ ಎಷ್ಟು ಮೊತ್ತದ ಮರಗಳು ಹರಾಜಾಗಿದೆ;

ಇ) ಕಳೆದ 3 ವರ್ಷಗಳಿಂದ ಕೊಡಗು ಜಿಲ್ಲೆಯ ಅರಣ್ಯ ಅಭಿವೃದ್ಧಿಗೆ ಇಲಾಖೆಯು ಎಷ್ಟು ಮೊತ್ತದ ಹಣ ಬಿಡುಗಡೆ ಮಾಡಿದೆ;

ಈ) 2002-2003ನೇ ಸಾಲಿಗೆ ರಾಜ್ಯದಲ್ಲಿ ಸೌರಶಕ್ತಿ ತಂತಿ ಬೇಲಿ ಅಳವಡಿಸಲು ಎಷ್ಟು ಮೊತ್ತದ ಹಣ ಬಿಡುಗಡೆ ಮಾಡಲಾಗಿದೆ (ಜಿಲ್ಲಾವಾರು ವಿವರ ನೀಡುವುದು);

ಉ) ಸೋಮವಾರಪೇಟೆ ತಾಲ್ಲೂಕು ಶಾಂತಳ್ಳಿ ಹೋಬಳಿ, ಕುಮಾರಳ್ಳಿ ಗ್ರಾಮದ ದೊಡ್ಡಬೆಟ್ಟಕ್ಕೆ ಸಾಮಾಜಿಕ ಅರಣ್ಯದಿಂದ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ಯಾವ ಯಾವ ಕಾಮಗಾರಿಗಳಿಗೆ ಎಷ್ಟು ಹಣ ಬಿಡುಗಡೆಯಾಗಿದೆ (ವಿವರ ನೀಡುವುದು);